1) ಒಂದು ನೇತ್ರ ತಜ್ಞರು

2) ಒಂದು ಅರವಳಿಕೆ ತಜ್ಞರು

ಆ) ಸಾಮಾನ್ಯ ವೈದ್ಯರುಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. 500 ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರ ಅಧಿಸೂಚನೆಯನ್ನು ದಿನಾಂಕ: 15–5–2005 ರಂದು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆಯ ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು.

561 (903) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ಹೊಸದಾಗಿ ಮಂಜೂರಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರ / ಘಟಕ ಮತ್ತು ಆಸ್ಪತ್ರೆಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರಗಳನ್ನು ಒದಗಿಸುವುದು)

ಆ) ಈ ಪೈಕಿ ಎಷ್ಟು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಇನ್ನೂ ಎಷ್ಟು ಆಸ್ಪತ್ರೆಗಳು ಕಾರ್ಯನಿರ್ವಹಿಸಬೇಕಾಗಿದೆ;

ಇ) ಈ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯ ಹಾಗೂ ವೈದ್ಯೇತರ ಹುದ್ದೆಗಳ ಸಂಖ್ಯೆ ಇದರ ಪೈಕಿ ಎಷ್ಟು ಹುದ್ದೆಗಳು ಖಾಲಿ ಇವೆ ಹಾಗೂ ಎಷ್ಟು ಹುದ್ದೆಗಳು ಭರ್ತಿಯಾಗಿದೆ;

ಈ) ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರ ಗ್ರಾಮದ ಆಸ್ಪತ್ರೆಯಲ್ಲಿ ಯಾವ ಯಾವ ಹುದ್ದೆಗಳು ಎಷ್ಟು ದಿನಗಳಿಂದ ಖಾಲಿ ಇವೆ; ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಉ) ಜಿಲ್ಲೆಗೆ ಮಂಜೂರಾಗಿರುವ ಎಷ್ಟು ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳಿವೆ; ಎಷ್ಟು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ; ಇವುಗಳಿಗೆ ಸ್ವಂತ ಕಟ್ಟಡವನ್ನು ನಿರ್ಮಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 2003–2004 ಮತ್ತು 2004–2005ನೇ ಸಾಲಿನಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ / ಘಟಕ / ಆಸ್ಪತ್ರೆಗಳನ್ನು ಹೊಸದಾಗಿ ಮಂಜೂರು ಆಗಿರುವುದಿಲ್ಲ.

2005–06ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ 4 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿದೆ. ಅವುಗಳು (1) ನಿಟ್ಟೂರು (2) ಹಳ್ಳಿಖೇಡ್ (3) ರಾಜೇಶ್ವರ (4) ಸಂತಾಪುರ. ಇವುಗಳಲ್ಲದೆ ಬಸವ ಕಲ್ಯಾಣ ಹಾಗೂ ಔರಾದ್ ತಾಲ್ಲೂಕು ಆಸ್ಪತ್ರೆಗಳನ್ನು 50 ಹಾಸಿಗೆ ಆಸ್ಪತ್ರೆಗಳಿಂದ 100 ಹಾಸಿಗೆ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.

2006–07ನೇ ಸಾಲಿನಲ್ಲಿ ಹುಮನಾಬಾದ್ ತಾಲ್ಲೂಕು 50 ಹಾಸಿಗೆಯಿಂದ 100 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಮೇಲ್ದರ್ಜೆಗೇರಿಸಿದ 4 ಸಮುದಾಯ ಆರೋಗ್ಯ ಕೇಂದ್ರಗಳ ಕಟ್ಟಡಗಳನ್ನು ಕಟ್ಟಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಹೆಚ್ಚುವರಿಯಾಗಿ ಮಂಜೂರು ಮಾಡಿದ ವೈದ್ಯರನ್ನು ಗುತ್ತಿಗೆ ಆಧಾರದ ಮೇರೆಗೆ ನೇಮಕಾತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿದೆ. ಇದರಂತೆ ಮೇಲ್ದರ್ಜೆಗೇರಿಸಿದ ತಾಲ್ಲೂಕು ಆಸ್ಪತ್ರೆಗಳಿಗೆ ಕಟ್ಟಡ ಕಟ್ಟಲು ಅಂದಾಜು ನಕ್ಷೆಯನ್ನು ತಯಾರಿಸಲು ಸೂಚಿಸಲಾಗಿದೆ ಮತ್ತು ಹೆಚ್ಚುವರಿ ಮಂಜೂರಾಗಿರುವ ವೈದ್ಯರು ಹಾಗೂ ಶುಶ್ರೂಷಕಿಯರನ್ನು ಗುತ್ತಿಗೆ ಆಧಾರದ ಮೇರೆಗೆ ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಇ) ಸದರಿ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯ ಹಾಗೂ ವೈದ್ಯೇತರ ಸಂಖ್ಯೆ ಈ ಕೆಳಕಂಡಂತಿದೆ:–

ಪ್ರಾ.ಆ. ಕೇಂದ್ರ ನಿಟ್ಟೂರು	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	6	4	2
ವೈದ್ಯೇತರ	28	25	3
ಪ್ರಾ.ಆ. ಕೇಂದ್ರ ಹಳ್ಳಿಖೇಡ್	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	6	5	1
ವೈದ್ಯೇತರ	4	30	4
ಪ್ರಾ.ಆ. ಕೇಂದ್ರ ರಾಜೇಶ್ವರ	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	5	2	3
ವೈದ್ಯೇತರ	20	19	1
ಪ್ರಾ.ಆ. ಕೇಂದ್ರ ಸಂತಾಪುರ	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	5	4	1
ವೈದ್ಯೇತರ	24	18	6
ತಾ. ಆಸ್ಪತ್ರೆ ಬಸವಕಲ್ಯಾಣ	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	12	7	5
ವೈದ್ಯೇತರ	53	47	6

ತಾ. ಆಸ್ಪತ್ರೆ ಔರಾದ್	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	14	7	7
ವೈದ್ಯೇತರ	37	27	10
ತಾ. ಆಸ್ಪತ್ರೆ, ಹುಮ್ನಾಬಾದ್	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	13	6	7
ವೈದ್ಯೇತರ	23	20	3

ಈ) ರಾಜೇಶ್ವರ ಗ್ರಾಮದ ಆಸ್ಪತ್ರೆಯಲ್ಲಿ ಈ ಕೆಳಕಂಡ ಹುದ್ದೆಗಳು ಖಾಲಿ ಇವೆ:-

ಕ್ರ.ಸಂ.	ಹುದ್ದೆ	ಖಾಲಿ ಹುದ್ದೆಗಳ ಸಂಖ್ಯೆ
1.	ಹಿರಿಯ ಆರೋಗ್ಯ ಸಹಾಯಕ	(ಒಂದು ವರ್ಷದಿಂದ ಖಾಲಿ ಇದೆ)

ಸಾಮಾನ್ಯ ವೈದ್ಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. 500 ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರ ಅಧಿಸೂಚನೆಯನ್ನು ದಿನಾಂಕ: 15-5-2005ರಂದು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆಯ ನಂತರದ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು.

ಉಳಿದ ಸಿಬ್ಬಂದಿಗಳನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ನಿಯಮಾವಳಿಯು ಅಂತಿಮ ಅಧಿಸೂಚನೆಯ ಪ್ರಕಟಣೆಯ ಹಂತದಲ್ಲಿದ್ದು, ಶೀಘ್ರದಲ್ಲಿಯೇ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

ಉ) ಎಲ್ಲಾ ಆಸ್ಪತ್ರೆಗಳಿಗೂ ಕಟ್ಟಡಗಳಿದ್ದು ಡಾವರ್‌ಗಾವ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಾತ್ರ ಸ್ವಂತ ಕಟ್ಟಡವಿರುವುದಿಲ್ಲ ಹಾಗೂ ಈ ಕಟ್ಟಡವನ್ನು ಹಾಲಿ ಆರ್.ಐ.ಡಿ.ಎಫ್. -11ರ ಅಡಿಯಲ್ಲಿ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲಾಗಿದೆ.

562 (904) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಯಾವ ಯಾವ ಯೋಜನೆಗಳು ಪ್ರಗತಿಯಲ್ಲಿವೆ: (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಈ ಯೋಜನೆಗಳಿಗಾಗಿ ಈ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಾಗಿಡಲಾಗಿದೆ ಈ ಪೈಕಿ ಇಲ್ಲಿಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;